## ಮುಜುಗರದ ಕತೆ

ಕಲರ್ಸ್ ಕನ್ನಡದ 'ಗೀತಾ' ಜಾಹೀರಾತು ಪ್ರಕಟಣೆಯಲ್ಲಿಯೇ ಮುಜುಗರ ಹುಟ್ಟಿಸುವಂತಿದೆ. ಅದರಲ್ಲಿ ಒಬ್ಬ ಗಂಡು ಪಾತ್ರಧಾರಿಯಿಂದ ಮಹಿಳೆ ಮುಂದೆ ಅಶ್ಲೀಲ ಪದ ಬಳಸುವುದು ತರವಲ್ಲ. ಆ ಧಾರಾವಾಹಿಯ ಮುಂದಿನ ಕಥೆ ಏನು ಎನ್ನುವ ಅದರ ಗುಣಮಟ್ಟವನ್ನು ಸಂದೇಹಿಸುವಂತೆ ಕಾಣಿಸಿತು. ಆ ಚುಟುಕು ದೃಶ್ಯವನ್ನು ಬಳಸದಿರಲಿ ಅಥವಾ ಅನಿವಾರ್ಯವಾದರೆ ಅದನ್ನು ಎಡಿಟ್ ಮಾಡಲಿ. ಏನೇ ಆದರೂ ಟೀವಿವಾಹಿನಿಗಳಿಗೆ ಸೆನ್ಸಾರ್ ಅಗತ್ಯ ಇದೆ ಎಂದು ಅನ್ನಿಸುತ್ತದೆ.

—ಅರುಣ್ ಕೆ.ಎನ್., ಬೆಂಗಳೂರು




## ತಪ್ಪಾಗದಿರಲಿ

ದಿನಾಂಕ 9.1.2020ರ 'ಥಟ್ ಅಂತ ಹೇಳಿ' ಸಂಚಿಕೆಯಲ್ಲಿನ ಲೆಕ್ಕದ ಪ್ರಶ್ನೆಯಲ್ಲಿ ಡಾ. ನಾ. ಸೋಮೇಶ್ವರರ ಅವರು ನೀಡಿದ ಉತ್ತರ 34+48=45 ಎಂದರು. ಸರಿಯಾದ ಉತ್ತರ 82. ಇನ್ನು ಉಳಿದಂತೆ ಒಟ್ಟು ಮೊತ್ತ 758 ಸರಿಯಾಗಿದೆ. ಪ್ರತಿ ಬಾರಿ ಸ್ಪರ್ಧಿಗಳ ಉತ್ತರ ತಪ್ಪಾಗುತ್ತಿತ್ತು. ಈ ಬಾರಿ ಡಾ.ನಾ. ಸೋಮೇಶ್ವರ ಅವರದು. ಪೂರ್ವ ಸಿದ್ಧತೆ ಇದ್ದು ಇತರರಿಗೆ ತಪ್ಪು ಸಂದೇಶ ರವಾನೆ ಆಗದಿರಲೆಂದು ನಮ್ಮ ಹಾರೈಕೆ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಸರಿಗಮಪಕ್ಕೊಂದು ಸಲಹೆ

ಸರಿಗಮಪ ಕಾರ್ಯಕ್ರಮದ ಹೊಸ ಆವೃತ್ತಿಯ ಪ್ರಾರಂಭದ ಕಲ್ಪನೆ ಚೆನ್ನಾಗಿದೆ. ಕಾರ್ಯಕ್ರಮದ ಬಗ್ಗೆ ಒಂದೆರಡು ಸಲಹೆ. ಅಚ್ಚ ಕನ್ನಡ ಕಾರ್ಯಕ್ರಮವಾದ ಇದಕ್ಕೆ ಇಂಗ್ಲಿಷ್ ಮಿಶ್ರಣ ಬೇಡ. ನಿರೂಪಕಿ ಅನುಶ್ರೀ ಅವರ ಮಾತುಗಾರಿಕೆ ಸೊಗಸಾಗಿದೆ. ಕೇವಲ ಹಾಸ್ಯಕ್ಕಾಗಿ ಅರ್ಜುನ್ ಜನ್ಯ ಹಾಗೂ ಅವರ ನಡುವಿನ ಬಾಂಧವ್ಯದ ಮಾತು ಒಮ್ಮೊಮ್ಮೆ ಅತಿರೇಕಕ್ಕೆ ಹೋಗುತ್ತದೆ. ಅದು ಸರಿಯಲ್ಲ ಎಂದು ನನ್ನ ಭಾವನೆ.

—ಶಿವನಾಪುರ ನರಸಿಂಹಮೂರ್ತಿ, ಬೆಂಗಳೂರು

ವಾರದ ಪತ್ರ

## ಹೆಣ್ಣಿನ ಅವಹೇಳನ

ನಮ್ಮ ಇತ್ತೀಚಿನ ಧಾರಾವಾಹಿಗಳತ್ತ ಒಮ್ಮೆ ಕಣ್ಣು ಹಾಯಿಸಿದರೆ 'ಮಿಥುನ ರಾಶಿ'ಯಲ್ಲಿ 'ಮಿಥುನ' ತನ್ನ ಹೆಂಡತಿ ರಾಶಿಯನ್ನು ಏ ಗೂಬೆ, ಏ ಪೆದ್ದಿ, ಏ ಕೋತಿ... ಇತ್ಯಾದಿ ಪದಗಳಿಂದಲೇ ಮಾತನಾಡಿಸುತ್ತಾನೆಯೇ ಹೊರತು ವಿಶ್ವಾಸದಿಂದ 'ರಾಶಿ' ಎಂದು ಮಾತನಾಡಿಸಿರುವುದನ್ನು ವೀಕ್ಷಕರು ಕಂಡಿಲ್ಲ. ಇನ್ನು ಇತ್ತೀಚೆಗೆ ಪ್ರಾರಂಭವಾಗಿರುವ 'ಗೀತಾ' ಧಾರಾವಾಹಿಯಲ್ಲಿ ಗೀತಾಳ ಅಪ್ಪ ತನ್ನ ಮನೆಯಲ್ಲಿರುವ (ಅವನ ಮಕ್ಕಳು) ಹೆಣ್ಣು ಮಕ್ಕಳಿಗೆ ಉಪಯೋಗಿಸದ ಕೆಟ್ಟ ಪದವಿಲ್ಲ ಕೆಲಸಕ್ಕೆ ಬಾರದವರು ಅನ್ನಕ್ಕೆ ದಂಡ ಇತ್ಯಾದಿ ಇತ್ಯಾದಿ ವಿಚಿತ್ರ ಹೋಲಿಕೆಗಳು ಆಮದು 'ರಪ್ಪು' ಮಾತೆತ್ತಿದರೆ ಹೆಂಡತಿಯನ್ನು ಎರಡು ಹೆಣ್ಣು ಹೆತ್ತಿದ್ದೀಯಾ ಎಂದು ಮೂದಲಿಸುವುದು ಹೊಡೆಯುವುದು ಇತ್ಯಾದಿ. ಹೆಂಡತಿ ತನ್ನದೇ ತಪ್ಪೇಂಬಂತೆ ಅಳುವುದೂ, ಹೆದರಿಕೊಳ್ಳುವುದೂ ಹುಟ್ಟುವ ಮಗು ಹೆಣ್ಣು ಅಥವಾ ಗಂಡು ಮಗುವಿಗೆ ಯಾರು ಹೇಗೆ ಕಾರಣ ಎಂಬುದನ್ನು ವಿಜ್ಞಾನ ಸಾಕಷ್ಟು ತಿಳಿಸುತ್ತಿರುವಾಗ ನಿರ್ದೇಶಕ, ನಿರ್ಮಾಪಕರು, ಕಥೆ ಬರೆಯುವವರು ಯಾವ ಶತಮಾನದಲ್ಲಿದ್ದಾರೆ? ಎನಿಸುತ್ತದೆ. ಸಂಭಾಷಣೆಯಲ್ಲಿ ಬಿಗಿ ಇದ್ದು ವೀಕ್ಷಕರ ಕಣ್ಣು ತೆರೆಸುವಂತಹ ಧಾರಾವಾಹಿಗಳು ಬೇಕು, ಏಕೆಂದರೆ ವಿದ್ಯಾವಂತ ವೀಕ್ಷಕ ಮಹಿಳೆಯರೂ ಇದ್ದಾರೆ.

—ಶಾಂತಾ ನಾಗರಾಜ್ ಕೆ., ಬೆಂಗಳೂರು

## ವಿಷಾದ ಹುಟ್ಟಿಸಿದ ಅಂಗಿ

3.1.2020ರಂದು ಚಂದನದ 'ಶುಭೋದಯದಲ್ಲಿ ಹೆಸರಾಂತ ಭಾವಗೀತೆ ಗಾಯಕ ಉಪಾಸನಾ ಮೋಹನ್‌ರ ಸಂದರ್ಶನವಿತ್ತು. ಅವರು ಕನ್ನಡ ಭಾವಗೀತೆಗಳನ್ನೇ ಕೇಳುಗರ ಮನೆಯಂಗಳಕ್ಕೆ ತೆಗೆದುಕೊಂಡು ಹೋಗುತ್ತಿರುವ ಕೈಂಕರ್ಯವನ್ನು ಹೆಮ್ಮೆಯಿಂದಲೇ ಹೇಳಿ ಕೊಳ್ಳುತ್ತಿದ್ದರು. ಸರಿಯೇ, ಆದರೆ ಅವರಿಗೆದುರಾಗಿ ಕುಳಿತು ಪ್ರಶ್ನೆ ಹಾಕುತ್ತಿದ್ದ ನಿರೂಪಕರು ತೊಟ್ಟ ಅಂಗಿಯಲ್ಲಿ ಪೂರಾ ಇಂಗ್ಲಿಷ್ ಮಾಹಿತಿಯುಕ್ತ (ಖಾಸಗಿ ಪ್ರಚಾರದ) ವಾಕ್ಯಗಳಿದ್ದವು. ಆದರೂ ಅವರಿಗೇನೂ ಸಂಕೋಚವಾದಂತೆ ಕಂಡು ಬರಲಿಲ್ಲ! 'ಚಂದನ' ಕನ್ನಡ ವಾಹಿನಿಯೆಂದೇ ಹೇಳಿಕೊಳ್ಳುತ್ತಿದೆ! ವಿಷಾದವಾಯ್ತು.

—ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

## ಸನ್ನಿಧಿ ಮಹಾತ್ಮೆ ?

ಅಂತೂ ಇಂತೂ 'ಅಗ್ನಿಸಾಕ್ಷಿ' ಮುಗಿಯಿತು. ಇದರಲ್ಲಿ ಅಗ್ನಿಯಾಗಲೀ, ಯಾರ ಸಾಕ್ಷಿಯಾಗಲೀ ಇರಲಿಲ್ಲ. ಕೇವಲ ದ್ವೇಷ–ರೋಷ ಇತ್ತು ಮತ್ತು ಸನ್ನಿಧಿ ಎಲ್ಲವನ್ನೂ ಮತ್ತು ಎಲ್ಲರನ್ನೂ ಸಂಭಾಳಿಸುವುದನ್ನು ಅಜೀರ್ಣ ಆಗುವಷ್ಟು ತೋರಿಸಲಾಗಿತ್ತು. ಈ ಧಾರಾವಾಹಿಯ ಹೆಸರು 'ಸನ್ನಿಧಿ ಮಹಾತ್ಮೆ' ಎಂದಿದ್ದರೆ ಅರ್ಥಪೂರ್ಣವಾಗಿರುತ್ತಿತ್ತು. ವಾಸುದೇವ ರಾವ್ ಪಾತ್ರವನ್ನು ಬೊದ್ದು ಮಹಾರಾಜ ಎಂದಿದ್ದರೆ ಚೆನ್ನಾಗಿರುತ್ತಿತ್ತೇನೋ? ಶೌರ್ಯ ಮತ್ತು ಅಂಜಲಿ ಮದುವೆ ಗನ್ ಪಾಯಿಂಟ್‌ನಲ್ಲಿ ಆಗಿದ್ದೇಕೆ ಎನ್ನುವುದನ್ನು ಹೇಳದಿರುವುದು ವೀಕ್ಷಕರಿಗೆ ಮಾಡಿದ ಮೋಸ.

—ರಮಾನಂದ ಶರ್ಮಾ, ನವದೆಹಲಿ

## ಮರು ಪ್ರಸಾರ ಮರುಕಳಿಸಲಿ

ನಾಡಿನ ಅತ್ಯಂತ ಮತ್ತು ವಿಶಿಷ್ಟ ಚಂದನ ವಾಹಿನಿಯಲ್ಲಿ ಮೂಡಿ ಬರುತ್ತಿರುವ 'ಥಟ್ ಅಂತ ಹೇಳಿ' ಕಾರ್ಯಕ್ರಮ ಸಮಸ್ತ ಕನ್ನಡಿಗರ ಅಚ್ಚುಮೆಚ್ಚಿನದಾಗಿದೆ ಎಂಬುದಕ್ಕೆ ಎರಡು ಮಾತಿಲ್ಲ. ಈ ಮೊದಲೆಲ್ಲ ಸದರಿ ಕಾರ್ಯಕ್ರಮದ ಮರುಪ್ರಸಾರ ಬೆಳಗಿನ ಹತ್ತರ ನಂತರ ಆಗುತ್ತಿತ್ತು. ಇದರಿಂದಾಗಿ ವಿಷಯಾಸಕ್ತ ನಿವೃತ್ತರಿಗೆ, ಹಿರಿಯ ನಾಗರಿಕರಿಗೆ ಮರು ಪ್ರಸಾರದ ಕಾರ್ಯಕ್ರಮ ವೀಕ್ಷಿಸಲು ತುಂಬ ಅನಾನುಕೂಲವಾಗುತ್ತಿತ್ತು. ಆದರೆ ಬೇಸರದ ಸಂಗತಿ ಏನೆಂದರೆ ಇತ್ತೀಚಿನ ದಿನಗಳಲ್ಲಿ ಸದರಿ ಕಾರ್ಯಕ್ರಮ ರಾತ್ರಿ 11 ಕ್ಕೆ ಮಾತ್ರ ಪ್ರಸಾರವಾಗುತ್ತಿದೆ. ಮರುದಿನ ಮರು ಪ್ರಸಾರವಾಗುತ್ತಿಲ್ಲ. ಇದರಿಂದಾಗಿ ರಾತ್ರಿ ಬೇಗ ನಿದ್ರೆಗೆ ಜಾರುವ ಅಭ್ಯಾಸವುಳ್ಳ ಜನರಿಗೆ ಕಾರ್ಯಕ್ರಮ ವೀಕ್ಷಿಸುವುದು ಇಲ್ಲದಂತಾಗಿದೆ. ಹೀಗಾಗಿ ಸಂಬಂಧಪಟ್ಟವರು ಎಲ್ಲ ವೀಕ್ಷಕರನ್ನು ದೃಷ್ಟಿಯಲ್ಲಿರಿಸಿಕೊಂಡು ಮೊದಲಿನಂತೆ ರಾತ್ರಿ ಪ್ರಸಾರವಾಗುತ್ತಿದ್ದ ಕಾರ್ಯಕ್ರಮವನ್ನು ಮರುದಿನ ಮರುಪ್ರಸಾರ ಮಾಡುವ ವ್ಯವಸ್ಥೆ ಮಾಡಲಿ ಎಂದು ನಮ್ಮ ಆಶಯ.

—ಅರವಿಂದ ಜಿ. ಜೋಷಿ, ಮೈಸೂರು